# ಜಿಲ್ಲಾ ಪಂಚಾಯತ್,ಬಳ್ಳಾರಿ

**ಸಂಖ್ಯೆ: ಜಿಂಪಬ/ಹಂಪಿಉತ್ಸವ/01/2019-20** **ದಿನಾಂಕ:21:12.2019**

## ಪ್ರಕಟಣೆ

2019-20ನೇ ಸಾಲಿನ ಹಂಪಿ ಉತ್ಸವ **"ಛಾಯಾಚಿತ್ರ ಸ್ಪರ್ಧೆ"** ಕಾರ್ಯಕ್ರಮಕ್ಕೆ, ಆಸಕ್ತಿಯುಳ್ಳ ನುರಿತ ಛಾಯಾಚಿತ್ರಕಾರರಿಗೆ ಭಾಗವಹಿಸುವುದಕ್ಕೆ ಮುಕ್ತ ಅವಕಾಶವನ್ನು ಕಲ್ಪಿಸಿದ್ದು, ಭಾಗವಹಿಸುವವರು **ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಬಳ್ಳಾರಿ** ಇವರಲ್ಲಿ ಅರ್ಜಿಯೊಂದಿಗೆ ಅಥವಾ ದೂರವಾಣಿ ಮೂಲಕ ದಿನಾಂಕ:**05-01-2020** ರೊಳಗಾಗಿ ನೊಂದಾಯಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: **08392-273465 ಅಥವಾ 7019495512, 9449624548** ನ್ನು ಸಂಪರ್ಕಿಸಬಹುದು. ಭಾಗವಹಿಸುವರಿಗೆ ಈ ಕೆಳಕಂಡ ನಿಯಮ ಮತ್ತು ನಿಬಂಧನೆಗಳನ್ನು ವಿಧಿಸಲಾಗಿದೆ.

**"ಛಾಯಾಚಿತ್ರ ಸ್ಪರ್ಧೆ"**

- ಛಾಯಾ ಚಿತ್ರಗಳ ವಿಷಯ: **1) ಹಂಪಿಯ ಸ್ಮಾರಕಗಳು ಮತ್ತು ಪ್ರಾಕೃತಿಕ ಚಿತ್ರಣ 2) ಗ್ರಾಮೀಣ ಬದುಕು 3)** ವನ್ಯಜೀವಿ **4) ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ ಹಾಗೂ ಜೀವಜಾಲ** ಸಂಬಂಧಿಸಿದ ಚಿತ್ರಣಗಳು.
- ಎಲ್ಲಾ ಛಾಯಾ ಚಿತ್ರಗಳು (ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿ) ದಿನಾಂಕ: **05-01-2020** ರೊಳಗೆ **ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆವರಣ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ** ಇವರಿಗೆ ಸಲ್ಲಿಸತಕ್ಕದ್ದು.
- ಛಾಯಾ ಚಿತ್ರದ ಗಾತ್ರ 12" x 18" ಕಡ್ಡಾಯವಾಗಿ ಇರತಕ್ಕದ್ದು. ಛಾಯಾ ಚಿತ್ರವು ಚೌಕಟ್ಟು (ಹುಕ್ಕಿನೊಂದಿಗೆ) ಹೊಂದಿರತಕ್ಕದ್ದು. ಅದರ ಶೀರ್ಷಿಕೆ, ವಿಷಯ ಮತ್ತು ಛಾಯಾಚಿತ್ರ ತೆಗೆದ ಸ್ಥಳದ ಕುರಿತು ಮಾಹಿತಿಯನ್ನು ಛಾಯಾಚಿತ್ರದ ಕೆಳಗೆ ನೀಡತಕ್ಕದ್ದು. ಜೊತೆಗೆ ಛಾಯಾಚಿತ್ರಗಾರರ ಹೆಸರು ಮತ್ತು ವಿಳಾಸವನ್ನು ಮತ್ತು ಕ್ಯಾಮೆರಾದ ನಮೂನೆ ಹಾಗೂ ಮಾದರಿ ಸಂಖ್ಯೆಯನ್ನು ನೀಡತಕ್ಕದ್ದು.
- ಭಾಗವಹಿಸುವವರು ಒಂದು ವಿಷಯದ ಬಗ್ಗೆ ಒಂದೇ ಚಿತ್ರವನ್ನು ಕಳುಹಿಸಬೇಕು. ಒಂದು ವೇಳೆ ಎಲ್ಲಾ ವಿಷಯಗಳ ಚಿತ್ರಗಳನ್ನು ಶೀರ್ಷಿಕೆಯೊಂದಿಗೆ ತಲಾ ಒಂದರಂತೆ ಕಳುಹಿಸಬಹುದು.
- ಎಲ್ಲಾ ಛಾಯಾ ಚಿತ್ರಗಳು ಮೂಲ ಚಿತ್ರಗಳಾಗಿರಬೇಕು. ಛಾಯಾಚಿತ್ರದ ಗಾತ್ರವನ್ನು ಸರಿಪಡಿಸಲು ಅವನ್ನು ಕ್ರಾಪ್ ಮಾಡಬಾರದು. ಡಿಜಿಟಲ್ ಮಿಕ್ಸಿಂಗ್ / ಎಫೆಕ್ಟ್ ಬಳಸಕೂಡದು.
- ಛಾಯಾ ಚಿತ್ರಗಳು ಕಪ್ಪು ಬಿಳುಪು ಅಥವಾ ಬಣ್ಣದ್ದಾಗಿರಬಹುದು.
- ಭಾಗವಹಿಸುವ ಛಾಯಚಿತ್ರಗಳು ಈ ಮುಂಚೆ ಯಾವುದೇ ಸ್ಪರ್ಧೆಗಳಲ್ಲಿ ಅಥವಾ ಪ್ರದರ್ಶನಗಳಲ್ಲಿ ಪ್ರದರ್ಶಿಸಿರಬಾರದು.
- ವಿಷಯವಾರು ಆಯ್ಕೆಯಾದ ಉತ್ತಮ ಕಲಾಕೃತಿಗಳಿಗೆ ಪ್ರಥಮ ಬಹುಮಾನ ರೂ 25,000/- ದ್ವಿತೀಯ ಬಹುಮಾನ ರೂ 15,000/- ಹಾಗೂ ತೃತೀಯ ಬಹುಮಾನ ರೂ 10,000/- ಗಳೊಂದಿಗೆ ಪ್ರಶಸ್ತಿ ಪತ್ರ ನೀಡಲಾಗುವುದು.
- ಕಲಾಕೃತಿಗಳು ಬಳ್ಳಾರಿ ಜಿಲ್ಲಾಧಿಕಾರಿಗಳ ಸುಪರ್ಧಿಗೊಳಪಡುತ್ತವೆ.
- ಸ್ಪರ್ಧೆಯ ಅರ್ಜಿಗಳನ್ನು ದಿನಾಂಕ:05.01.2020ರೊಳಗಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ ಆವರಣ, ಬಳ್ಳಾರಿ ಇಲ್ಲಿ ಪಡೆಯಬಹುದು.

ಸಹಾಯಕ ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ,
ಬಳ್ಳಾರಿ.